ಕಥೆಯಾಗಿ 'ಮಯೂರ'ದಲ್ಲಿಯೇ ಪ್ರಕಟವಾಯ್ತು. ನಂತರ ಸಿನಿಮಾ ಆಗಿದ್ದು' ಎಂದು ನೆನಪಿಸಿಕೊಂಡರು ಪೈ.

ಮಾತನ್ನು ಸಾಹಿತ್ಯ ಮತ್ತು ಸಿನಿಮಾ ಲೋಕಗಳ ನಡುವಿನ ಸಂಬಂಧದ ಕುರಿತು ಮಾತು ಹೊರಳಿಸುವ ಉದ್ದೇಶದಿಂದ ಪೈ ಅವರು, 'ಕನ್ನಡ ಸಾಹಿತಿಗಳಿಗೆ ಸಿನಿಮಾ ಲೋಕದ ಬಗ್ಗೆ ಅಷ್ಟು ಒಳ್ಳೆಯ ಅಭಿಪ್ರಾಯ ಇದೆಯಾ?' ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಅದರ ಜಾಡನ್ನೇ ಹಿಡಿದು ಹೊರಟರು ಗಿರೀಶ.

'ಸಿನಿಮಾ ನೋಡುವವರು ಸಾಕಷ್ಟು ಜನ ಇದ್ದಾರೆ. ಆದರೆ ಅದರ ಬಗ್ಗೆ ಬರೆಯುವವರು ತುಂಬ ಕಡಿಮೆ ಇದ್ದಾರೆ. ಬರೆಯುವವರು ಕೂಡ ಕಥಾವಸ್ತುವಿನ ಬಗೆಗೆ ಬರೆಯುತ್ತಾರೆ. ಆದರೆ ಇಡೀ ಸಿನಿಮಾ ಅಂದರೆ ಕಥಾವಸ್ತು ಅಲ್ಲ, ಅದರ ಅನುಭವವೇ ಬೇರೆ ರೀತಿಯದ್ದು. ಯಾಕೆ ಬರೀತಾ ಇಲ್ಲ ಅನ್ನುವುದಕ್ಕೆ ಹಲವು ಕಾರಣಗಳಿವೆ ಅನಿಸುತ್ತದೆ. ನಮ್ಮಲ್ಲಿ ವಿಷುವಲ್ ಕಲ್ಚರ್ ಇಲ್ಲ. ಇದೊಂದು ಮೂಲಭೂತ ಸಮಸ್ಯೆ, ಇದಕ್ಕೆ ನಾನು ಸಾಹಿತಿಗಳನ್ನು ಹೊಣೆಗಾರನನ್ನಾಗಿ ಮಾಡುವುದಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ದೃಶ್ಯ ಸಂಸ್ಕೃತಿಗೆ ಯಾವ ರೀತಿಯಲ್ಲಿಯೂ ಒತ್ತುಕೊಡುತ್ತಿಲ್ಲ ಎನ್ನುವುದೇ ಇದಕ್ಕೆ ಮುಖ್ಯ ಕಾರಣ. ನಾವು ಪ್ರತಿದಿನ ಒಂದಲ್ಲ ಒಂದು ಕೆಟ್ಟ ಕಟ್ಟಡಗಳನ್ನು ನೋಡುತ್ತಲೇ ಇರುತ್ತೇವೆ. ಕೆಟ್ಟ ಬಣ್ಣ, ಕೆಟ್ಟ ವಿನ್ಯಾಸದ ಕಟ್ಟಡಗಳನ್ನು ನೋಡುತ್ತೇವೆ. ಆದರೆ ನಮಗೆ ವಾಸ್ತುಶಿಲ್ಪದ ಪ್ರಜ್ಞೆ, ಅದರ ಬಗ್ಗೆ ಅಭಿರುಚಿ ಇಲ್ಲದೇ ಇದ್ದರೆ ಆ ಕೆಟ್ಟ ಕಟ್ಟಡಗಳನ್ನೇ ನಾವು ಸಹಜ ಎಂದುಕೊಂಡುಬಿಡುತ್ತೇವೆ. ಆದರೆ ಸಾಹಿತ್ಯಕ್ಕೆ ಹಾಗಾಗುವುದಿಲ್ಲ. ಆ ಕೃತಿಯನ್ನು ನೀವು ಆಸೆಪಟ್ಟು ಓದದೇ ಇದ್ದರೆ ನಿಮಗದು ಗೊತ್ತಾಗುವುದಿಲ್ಲ. ಹಾಗಾಗಿ ಒಂದು ಕೆಟ್ಟ ಸಾಹಿತ್ಯಕೃತಿ ಬಂದರೂ ಅದು ಮಾಡುವ ಪ್ರಭಾವ ಕಮ್ಮಿ ಇರುತ್ತದೆ. ಆದರೆ ಕೆಟ್ಟ ಆರ್ಕಿಟೆಕ್ಚರ್ ಬಂದರೆ ಅದು ಮಾಡುವ ಪ್ರಭಾವ ಬಹಳ ಜಾಸ್ತಿ ಇರುತ್ತದೆ. ಸಿನಿಮಾ ಸಹ ವಾಸ್ತುಶಿಲ್ಪದ ಹಾಗೆಯೇ. ಯಾಕೆಂದರೆ ನಾವಾಗಿ ಅದನ್ನು ನೋಡದೇ ಇದ್ದರೂ ಅದು ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಯಾರೋ ಟೀವಿ ಹಾಕಿರುತ್ತಾರೆ. ಅದರಲ್ಲಿನ ಕೆಟ್ಟ ಬಣ್ಣಗಳು, ಸಂಯೋಜನೆ ಇವುಗಳೇ ಸರಿಯಾದದ್ದು ಅಂದುಕೊಂಡುಬಿಡುತ್ತೇವೆ. ನನ್ನ ಸಿನಿಮಾದ ಬಗ್ಗೆ ಬರುವ ಬಹಳ ದೊಡ್ಡ ಆಕ್ಷೇಪ ಏನೆಂದರೆ, 'ನಿಮ್ಮ ಸಿನಿಮಾಗಳಲ್ಲಿ ಯಾರೂ ಕ್ಯಾಮೆರಾಕ್ಕೆ ಮುಖಕೊಟ್ಟು ಮಾತನಾಡುವುದಿಲ್ಲ' ಎಂದು. ಆದರೆ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲಿ ಮೊದಲು ಹೇಳಿಕೊಡುವ ಪಾಠವೇ ಕ್ಯಾಮೆರಾಕ್ಕೆ ಮುಖ ಕೊಟ್ಟು ಮಾತನಾಡಬೇಡಿ ಎಂದು.'

ಇಷ್ಟು ಹೇಳಿ ಸಿನಿಮಾ ಮಾಧ್ಯಮ ವಿಕಾಸಗೊಂಡ ಬಗ್ಗೆ ತಾವೇ ಕಟ್ಟಿಕೊಂಡಿರುವ ಒಂದು ಸಿದ್ಧಾಂತವನ್ನೂ ಅವರು ಹೇಳಿಕೊಂಡರು. 'ಜಗತ್ತಿನ ಸಿನಿಮಾ ಫೋಟೊಗ್ರಫಿಯ ವಿಸ್ತರಣೆಯಾಗಿ ರೂಪುಗೊಂಡಿತು. ಅಂದರೆ ಅದು ವಿಷುವಲ್‌ನಿಂದಲೇ ಹುಟ್ಟಿತು. ಆದರೆ ಭಾರತದಲ್ಲಿ ಸಿನಿಮಾ ರಂಗಭೂಮಿಯಿಂದ ಹುಟ್ಟಿದ್ದು. ಆದ್ದರಿಂದಲೇ ಮೊದಲಿನ ಎಲ್ಲ ಸಿನಿಮಾಗಳಲ್ಲಿಯೂ ರಂಗಭೂಮಿಯ ಪ್ರಭಾವ ಎದ್ದು ಕಾಣುತ್ತದೆ. ಆದರೆ ಕನ್ನಡ ಹೊಸ ಅಲೆ ಸಿನಿಮಾಗಳು ಹುಟ್ಟಿದ್ದು ಇವೆರಡರಿಂದಲೂ ಅಲ್ಲ. ಅದು ಸಾಹಿತ್ಯದ ಸಂವೇದನೆಯಿಂದ ಹುಟ್ಟಿದ್ದು. ಹಾಗಾಗಿ ನಮ್ಮಲ್ಲಿ ಒಳ್ಳೆಯ ಕಥೆ ಇದ್ದರೆ ಸಿನಿಮಾ ಆಗುತ್ತದೆ ಎಂಬ ನಂಬಿಕೆ ಇದೆ. ಕನ್ನಡ ಸಿನಿಮಾಗಳಿಗೇ ಸೀಮಿತವಾಗಿರಿಸಿಕೊಂಡು ಹೇಳುವುದಾದರೆ ಕಥೆ ಚೆನ್ನಾಗಿದ್ದರೆ, ಅದಕ್ಕೆ ವಾಸ್ತವತೆಯ ಲೇಪನ ಇದ್ದ ತಕ್ಷಣ ಒಳ್ಳೆಯ ಸಿನಿಮಾ ಎನ್ನಲು ಶುರುಮಾಡಿಬಿಡುತ್ತೇವೆ. ಇವೆರಡೂ ಸಿನಿಮಾದ ಬಗ್ಗೆ